# ಮುಕ್ಕಾಗದ ಕುಡಿಕೆ

■ ಈರಪ್ಪ ಎಂ. ಕಂಬಳಿ



ನೆನಪಿನ ಚುಂಗು ಹಿಡಿದು ಅರ್ಧ ಶತಮಾನ ಹಿಂದಕ್ಕೆ ಹೋಗಿ ನಿಂತು, ಸಾಕ್ಷೀಪ್ರಜ್ಞೆಯಾಗಿ ಆ ಕಾಲಘಟ್ಟವನ್ನು ಮೆಲುಕು ಹಾಕುವದೆಂದರೇನೇ ಆಪ್ಯಾಯಮಾನವಾದ ಅನುಭವ ನನ್ನಂಥವರ ಪಾಲಿಗೆ. ಮಣ್ಣಿಗೂ ಮನುಷ್ಯನಿಗೂ ಅವಿನಾಭಾವ ಸಂಬಂಧ ಇದ್ದೇ ಇದೆ, ಎಲ್ಲ ಕಾಲಕ್ಕೂ. ಹದ್ದು ಎಷ್ಟೇ ಆಕಾಶದೆತ್ತರಕ್ಕೆ ಹಾರಿದರೂ ಹಸಿದಾಗ ಮತ್ತೇ ನೆಲವನ್ನೇ ಆಶ್ರಯಿಸುವಂತೆ.

ಪ್ರತಿಯೊಬ್ಬರೂ ಒಂದಲ್ಲ ಒಂದು ದಿನ ಸಾಯಲೇಬೇಕು, ನಿಜ. ಹಾಗೆ ಸತ್ತವರು ಎಲ್ಲಿ ಹೋಗಿ ಸೇರಿಕೊಳ್ಳುತ್ತಾರೆ ಎಂಬ ಅಸಲು ಪ್ರಶ್ನೆಗೆ ಸೂಕ್ತ ಉತ್ತರವೆಲ್ಲಿದೆ? ಇದೇನಿದು, ಆರಂಭದಲ್ಲಿಯೆ ಈತನದು 'ಸಾವಿನ ಜಿಜ್ಞಾಸೆ' ಎಂದು ಹುಬ್ಬೇರಿಸದಿರಿ. ಪ್ರತಿಯೊಬ್ಬರೂ ಹುಟ್ಟಿದ ಮೇಲೆ ಸಾಯಲೇಬೇಕು, ನಿಜ. ಹಾಗೆ, ಸತ್ತ ಮೇಲೆ ಯಾರೂ ಎಲ್ಲಿಗೂ ಹೋಗುವುದಿಲ್ಲ ಅನ್ನುವುದೂ ಅಷ್ಟೇ ದಿಟ. ಹಾಗಾದರೆ ಇನ್ನೇನು? ಅವರವರ ವ್ಯಕ್ತಿತ್ವದ ಗಟ್ಟಿತನದಿಂದಾಗಿ, ಸತ್ತ ಮೇಲೆ ಬದುಕಿದ್ದವರ ಮನಸ್ಸಿನೊಳಗೆ ನೆನಪುಗಳಾಗಿ ಜೀವಂತ ಉಳಿಯುತ್ತಾರೆ, ಅಷ್ಟೇ. ಹೌದು, ಹಾಗೆ ಜೀವಂತ ನೆನಪುಗಳಾಗಿ 'ಕಾಡುವ ಗುಣ' ಇದೆಯಲ್ಲ, ಇದೇ ವ್ಯಕ್ತಿತ್ವದ ಅಸಲೀತನ.

ಆಗಿನ್ನೂ ಮಣ್ಣಿನ ಕುಡಿಕೆ ಮಡಿಕೆಗಳ ಒಡನಾಟದಲ್ಲಿದ್ದ ದಿನಗಳು ನನ್ನವು. ಕಾಯಿಸಿದ ಹಾಲಿಗೆ ಹೆಪ್ಪು ಹಾಕಲೂ ಮಣ್ಣಿನ ಸೋರೆ–ಮಡಿಕೆ. ಅನ್ನರಿಗೆ ಮೊಸರು ಅಳೆದು ಸುರಿಯಲೂ ಮಣ್ಣಿನ ಕುಡಿಕೆ. ಕೆರೆಬಾವಿಗಳಿಂದ ನೀರು ಹೊತ್ತು ತರಲೂ ಮಣ್ಣಿನ ಕೊಡಗಳು. ಮನೆಯಲ್ಲಿ ನೀರು ತುಂಬಿಟ್ಟುಕೊಳ್ಳಲೂ ದೊಡ್ಡ ಗಾತ್ರದ ಮಣ್ಣಿನ ಹರವಿಗಳು. ವಾಹ್! ಮೈ ತೊಳೆದುಕೊಳ್ಳುವಾಗ ಉಜ್ಜಿಕೊಳ್ಳಲು ಒಡೆದ ಮಣ್ಣಿನ ಪಾತ್ರೆಯ ತುಂಡು ಬೋಕಿ ಕೆರಕ. ಅಲಂಕಾರವಾಗಿ ಹೂಗುಚ್ಛ ಸಿಕ್ಕಿಸಲೂ ಬೇಕು ಮಣ್ಣ ಹೂಜಿ. 'ಘಟ' ಎಂದರೆ ಸುಮ್ಮನೇ ಏನು?